the Hon'ble Speaker, to the Government and Minister to reduce the number of seats to have better quality of doctors in our State. That is my contention. It has become a trade. Let them not mix trade with Education. It is the question of life and death.

ಶ್ರೀ ಬಸವರಾಜ ರಾಯರೆಡ್ಡಿ:- ೩೪ ಜನ ವಿದ್ಯಾರ್ಥಿಗಳನ್ನು ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಆದರೆ ಅವರು ಪರೀಕ್ಷೆಗೆ ಕೂರಿಸಿದ್ದಾರೆ. ಇದರ ಬಗ್ಗೆ ಉತ್ತರ ಕೊಡಿ.

ಶ್ರೀ ಜಿ. ರಾಮಕೃಷ್ಣ:- ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ:- ೩೪ ಜನ ವಿದ್ಯಾರ್ಥಿಗಳು ಈಗಾಗಲೇ ಪರೀಕ್ಷೆ ತೆಗೆದುಕೊಂಡಿದ್ದಾರೆ.

ಶ್ರೀ ಜಿ. ರಾಮಕೃಷ್ಣ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಸಚಿವರು ಗುಲ್ಬರ್ಗಾ ಜಿಲ್ಲೆಯವರಿದ್ದಾರೆ. ಮಾನ್ಯ ಸಚಿವರಿಗೆ ಇದೆಲ್ಲಾ ಚೆನ್ನಾಗಿ ಗೊತ್ತಿದೆ. ಗೊತ್ತಿದ್ದೂ ಕೂಡ ಈ ರೀತಿ ಹೇಳುತ್ತಿದ್ದಾರೆ.

ಶ್ರೀ ಜಿ. ರಾಮಕೃಷ್ಣ:- ೯೧೯೨ ರೊಳಗೆ ಅವರನ್ನು ಅಡ್ಮಿಟ್ ಮಾಡಿದ್ದಾರೆ. ಇದು ಸೆಂಟ್ರಲ್ ಗೌರ್ನಮೆಂಟ್ ಇನ್‌ಸ್ಪೆಕ್ಷನ್ ಮತ್ತು ಆರ್ಡರ್ ಬಂದ ಮೇಲೆ ಕೊಡಲಾಗಿದೆಯೋ ಎಂಬುದನ್ನು ಪರಿಶೀಲನೆ ಮಾಡುತ್ತೇನೆ. ಮತ್ತು ಅವರನ್ನು ಎಕ್ಸಾಮಿನೇಷನ್‌ಗೆ ಅಲೋ ಮಾಡಬೇಕೇ ಬೇಡವೇ ಎಂಬುದನ್ನೂ ಪರಿಶೀಲನೆ ಮಾಡುತ್ತೇನೆ.

ವಿಷಯ:- ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೭:- (೬೩೩)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿಪಡಿಸಲು ಸಾಕಷ್ಟು ಉತ್ತಮ ಅವಕಾಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರಾಜ್ಯದಲ್ಲಿ ಒಟ್ಟು ಎಷ್ಟು ಸಾವಿರ ಎಕರೆ ಪ್ರದೇಶಗಳಲ್ಲಿ ಅರಣ್ಯವಿರುವುದು (ಜಿಲ್ಲಾವಾರು ವಿವರ ನೀಡುವುದು)

ಇ) ಇನ್ನೂ ಎಷ್ಟು ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿಪಡಿಸಲಾಗುವುದು.

ಈ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಜಮೀನನ್ನು ಅರಣ್ಯವನ್ನಾಗಿ ಅಭಿವೃದ್ಧಿ ಪಡಿಸಲು ಗುರುತಿಸಲಾಗಿದೆ. ಹಾಗೂ ಈ ಕಾರ್ಯಕ್ರಮವನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಎಂ.ಪಿ. ಕೇಶವಮೂರ್ತಿ
(ಅರಣ್ಯ ರಾಜ್ಯ ಸಚಿವರು)

ಬಂದಿದೆ.

ಒಟ್ಟು ೩೮,೩೪,೪೩೪ ಹೆಕ್ಟೇರ್ ಪ್ರದೇಶ. ಜಿಲ್ಲಾವಾರು ವಿವರ ಈ ಕೆಳಗಿನಂತೆ ಇದೆ.

ಜಿಲ್ಲೆ	ಅರಣ್ಯ ಪ್ರದೇಶ (ಹೆಕ್ಟೇರ್‌ನಲ್ಲಿ)
೧) ಬೆಂಗಳೂರು (ನಗರ)	೭,೩೬೪
೨) ಬೆಂಗಳೂರು (ಗ್ರಾ)	೧,೦೯,೪೩೮
೩) ಬೆಳಗಾಂ	೨,೨೪,೫೫೭
೪) ಬಳ್ಳಾರಿ	೧,೭೪,೩೫೩
೫) ಬೀದರ್	೪೮,೨೩೧
೬) ಬಿಜಾಪುರ	೮೩,೭೫೮
೭) ಚಿಕ್ಕಮಗಳೂರು	೨,೧೭,೯೦೮
೮) ಚಿತ್ರದುರ್ಗ	೧,೫೬,೨೨೯
೯) ದಕ್ಷಿಣ ಕನ್ನಡ	೫,೧೮,೧೩೦
೧೦) ಧಾರವಾಡ	೧,೪೩,೬೭೩
೧೧) ಗುಲ್ಬರ್ಗಾ	೧,೧೩,೭೮೫
೧೨) ಹಾಸನ	೫೪,೧೦೭
೧೩) ಕೊಡಗು	೧,೨೫,೯೫೨
೧೪) ಕೋಲಾರ	೧,೦೩,೯೪೧
೧೫) ಮಂಡ್ಯ	೧೯,೩೭೯
೧೬) ಮೈಸೂರು	೪,೧೨,೯೬೨
೧೭) ರಾಯಚೂರು	೧,೦೯,೦೦೩
೧೮) ಶಿವಮೊಗ್ಗ	೩,೨೭,೦೧೬
೧೯) ತುಮಕೂರು	೮೬,೫೧೭
೨೦) ಉತ್ತರ ಕನ್ನಡ	೮,೨೯,೧೫೧
ಒಟ್ಟು	೩೮,೩೪,೪೫೪ ಹೆಕ್ಟೇರ್

ಪ್ರತಿ ವರ್ಷ ಗುರಿ ನಿಗದಿಪಡಿಸಿ ಹಂತಹಂತವಾಗಿ ವಿವಿಧ ಯೋಜನೆಗಳಡಿಯಲ್ಲಿ ಅರಣ್ಯ ಅಭಿವೃದ್ಧಿ ಗೊಳಿಸಲಾಗುತ್ತಿದೆ.

ಮಾಗಡಿ ತಾಲ್ಲೂಕಿನಲ್ಲಿ ೮೧೫೫ ಹೆಕ್ಟೇರ್ ಅರಣ್ಯ ಪ್ರದೇಶವಿದ್ದು ಇದರಲ್ಲಿ ೬೦೭೨ ಹೆಕ್ಟೇರ್ ಕ್ಷೀಣಿತ ಅರಣ್ಯ ಪ್ರದೇಶವಾಗಿದ್ದು ಮುಂದಿನ ವರ್ಷಗಳಲ್ಲಿ ಹಂತಹಂತವಾಗಿ ಪ್ರತಿ ವರ್ಷ ಗುರಿ ನಿಗದಿಪಡಿಸಿ ಆಯಾವರ್ಷ ಕಾರ್ಯಕ್ರಮದನ್ವಯ ಅರಣ್ಯಾಭಿವೃದ್ಧಿ ಪಡಿಸಲಾಗುವುದು.

ಶ್ರೀ ಹೆಚ್.ಎಂ. ರೇವಣ್ಣ:- ಸನ್ಮಾನ್ಯ ಅಧ್ಯಕ್ಷರೆ, ಈಗಿರುವ ಅರಣ್ಯ ಪ್ರದೇಶ ೩೮,೩೪,೪೫೪ ಹೆಕ್ಟೇರ್ ಎಂದು ಇದೆ. ಇದರಲ್ಲಿ ನಾನು ಕೇಳಿದ್ದುದು, ಇರತಕ್ಕಂಥ ಅರಣ್ಯದ ಜೊತೆಗೆ ಇನ್ನೆಷ್ಟು ಎಕರೆಯನ್ನು ಅರಣ್ಯಕ್ಕೆ ಸೇರಿಸುತ್ತಿರಾ ಎಂದು ಕೇಳಿದ್ದಕ್ಕೆ ನಿಖರವಾದ ಉತ್ತರ ಇಲ್ಲ. ಎರಡನೆಯದಾಗಿ ಈ ಅರಣ್ಯ ಇಲಾಖೆಯಲ್ಲಿ ಎರಡು ವಿಧ ಇದೆ. ಸಾಮಾಜಿಕ ಅರಣ್ಯ ಮತ್ತು ರೆಗ್ಯುಲರ್. ಸಾಮಾಜಿಕ ಅರಣ್ಯದಲ್ಲಿ ಎಲ್ಲಿ ಸಸಿಗಳನ್ನು ಹಾಕುತ್ತಾರೆ? ಕೆರೆ ಅಂಗಳ, ರೈಲ್ವೇ ಹಳಿಗಳ ಪಕ್ಕ, ಗುಡ್ಡಗಾಡುಗಳಲ್ಲಿ. ಇಂಥ ಕಡೆ ಹಾಕತಕ್ಕಂಥ ಸಸಿಗಳನ್ನು ವರ್ಷ ಪೂರ್ತಿ ಹಾಕುತ್ತಲೇ ಇರುತ್ತಾರೆ. ಆದರೆ ಅದನ್ನು ಅಭಿವೃದ್ಧಿ ಪಡಿಸುವ ಕ್ರಮ ತೆಗೆದುಕೊಂಡಿಲ್ಲ. ಆದರ

ಬಗ್ಗೆ, ಏನಾದರೂ ಮಾಡುತ್ತಾರೆಯೇ ಎಂದು ಕೇಳುತ್ತೇನೆ. ಸರ್ಕಾರಿ ಜಾಗವನ್ನು ಸಕ್ರಮಗೊಳಿಸತಕ್ಕಂಥ ಕಾರ್ಯಕ್ರಮ ಏನಿದೆ ಅಲ್ಲಿಯೂ ಕೂಡ ಅರಣ್ಯ ಇಲಾಖೆಯವರು ಸಸಿ ಹಾಕಿರುವುದರಿಂದ ಅಲ್ಲಿ ಹರಿಜನರು ಮತ್ತು ಬಡವರು ನಾವು ಮಾಡುತ್ತಿದ್ದೇವೆಂದು ಕೇಳುತ್ತಾರೆ. ಆ ಜಾಗವನ್ನು ಏನಾಯಿತಿ ಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ.ಪಿ. ಕೇಶವಮೂರ್ತಿ:- ಈಗ ಕರ್ನಾಟಕ ರಾಜ್ಯದಲ್ಲಿ ೩೮,೩೪,೪೫೪ ಹೆಕ್ಟೇರ್ ಅರಣ್ಯ ಅಭಿವೃದ್ಧಿಗೆ ಮಾಡಿದ್ದೇವೆ. ಮಾನ್ಯ ಸದಸ್ಯರು, ಪ್ರತಿ ವರ್ಷ ಎಷ್ಟು ಮಾಡುತ್ತೇವೆಂದು ಕೇಳಿದ್ದಾರೆ. ಕೇಂದ್ರ ಸರ್ಕಾರದ ಪ್ರಕಾರ ನಮ್ಮ ರಾಜ್ಯದಲ್ಲಿ ೨,೫೮,೦೦೦ ಹೆಕ್ಟೇರ್ ಭೂಮಿಯನ್ನು ಲ್ಯಾಂಡ್ ಬ್ಯಾಂಕಿಂಗ್ ಆಗಿ ಇಟ್ಟುಕೊಂಡಿದ್ದೇವೆ. ಪ್ರತಿ ವರ್ಷ ೪೦-೪೫ ಸಾವಿರ ಹೆಕ್ಟೇರ್ ಭೂಮಿಯನ್ನು ಅರಣ್ಯ ಅಭಿವೃದ್ಧಿ ಮಾಡಲಿಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಬಡವರು ಏನು ಸರ್ಕಾರದ ಅರಣ್ಯ ಜಮೀನನ್ನು ಒತ್ತುಮಾಡಿ ೧೯೭೮ ಏಪ್ರಿಲ್ ೨೭ರ ಹಿಂದೆ, ಯಾರು ಇಂಥ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೋ ಅಂಥ ೩೮ ಸಾವಿರ ಜನರನ್ನು ನಾವು ಈಗಾಗಲೇ ಗುರುತಿಸಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ಇದಕ್ಕಾಗಿ ಒಂದು ಸಮಿತಿಯನ್ನು ಪ್ರಾರಂಭ ಮಾಡಿಸಿ, ಅರ್ಹರಾಗಿರತಕ್ಕಂಥವರನ್ನು ಸಕ್ರಮಗೊಳಿಸಲು, ಆಲೋಚನೆ ಮಾಡಿದ್ದೇವೆ ಮತ್ತು ಸಾಮಾನ್ಯವಾಗಿ ಅರಣ್ಯ ಇಲಾಖೆಯವರು ಬೆಳೆಸಿದ ಗಿಡಗಳು ಮತ್ತೆ ಮತ್ತೆ ಹೋಗುತ್ತಿವೆ, ಅವುಗಳ ರಕ್ಷಣೆಗಾಗಿ ಈಗಾಗಲೇ ಕ್ರಮ ತೆಗೆದುಕೊಂಡು ಮತ್ತೆ ನಡತಕ್ಕಂಥ ಕಾರ್ಯಕ್ರಮ ಸರಕಾರದಲ್ಲಿ ಇದೆ. ಅವುಗಳನ್ನು ಸರಿಯಾಗಿ ನೋಡಿಕೊಳ್ಳಲು ವಾಚರ್ ಮತ್ತು ಗಾರ್ಡ್‌ಗಳನ್ನು ಕೂಡ ಹಾಕಿದ್ದೇವೆ.

ಶ್ರೀ ಹೆಚ್.ಎಂ. ರೇವಣ್ಣ:- ಮಾನ್ಯ ಅಧ್ಯಕ್ಷರೇ, ಸೋಶಿಯಲ್, ಫಾರೆಸ್ಟರಿಯಲ್ಲಿ ಕೆರೆಯಂಗಳ ಮತ್ತು ಬೇರೆ ಕಡೆಗಳಲ್ಲಿ ಸಸಿಗಳನ್ನು ಹಾಕುತ್ತಾರೆ. ಈ ಕಾರ್ಯಕ್ರಮವನ್ನು ಪ್ರತಿವರ್ಷವು ಮಾಡುತ್ತಾ ಇರುತ್ತಾರೆ. ಹಾಗೆ ಒಂದೇ ಜಾಗದಲ್ಲಿ ಮೂರು ವರ್ಷಗಳು ಹಾಕುವುದಕ್ಕಿಂತ ಸರಿಯಾದ ಜಾಗದಲ್ಲಿ ಹಾಕಿ ಅದನ್ನು ಉಳಿಸಿಕೊಂಡು ಬೆಳೆಸಿಕೊಳ್ಳುವುದಕ್ಕೆ ಪ್ರಯತ್ನವನ್ನು ಏಕೆ ಮಾಡಿಲ್ಲ ? ನನಗೆ ಗೊತ್ತಿರುವ ಪ್ರಕಾರ ಈ ಸೋಶಿಯಲ್ ಫಾರೆಸ್ಟರಿಯಲ್ಲಿ ಹೆಚ್ಚು ಹಣ ವ್ಯಯವಾಗುತ್ತಾ ಇದೆ. ಇದರ ಬಗ್ಗೆ ಯಾರ ಮೇಲಾದರೂ ನೀವು ಕ್ರಮವನ್ನು ತೆಗೆದುಕೊಂಡಿದ್ದೀರಾ? ಬಹಳಷ್ಟು ಕಡೆಗಳಲ್ಲಿ ಈ ಹಣದ ಉಪಯೋಗವು ಸರಿಯಾಗಿ ಆಗಿಲ್ಲ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಂ.ಪಿ. ಕೇಶವಮೂರ್ತಿ:- ದುರುಪಯೋಗ ಆಗಿದೆ ಎಂಬ ಬಗ್ಗೆಯಾವುದೇ ಮಾಹಿತಿಯು ಸರಕಾರಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಅಂಥ ನಿಖರವಾದ ಮಾಹಿತಿಯನ್ನು ಕೊಟ್ಟಲ್ಲಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮವನ್ನು ಜರುಗಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಶಿವಾನಂದ ಕೌಜಲಗಿಯವರ ಪ್ರಶ್ನೆ ೩೮(೪೨೭)ನ್ನು ತಡೆಹಿಡಿಯಲಾಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೆ, ಸರಕಾರಿ ಮೆಡಿಕಲ್, ಡೆಂಟಲ್, ಫಾರ್ಮಸಿ ಕಾಲೇಜುಗಳಲ್ಲಿ ಒಬ್ಬ ವಿದ್ಯಾರ್ಥಿಗೆ ಈ ಕೋರ್ಸುಗಳನ್ನು ಮುಗಿಸಲು ಎಷ್ಟು ಖರ್ಚು ಬರುತ್ತದೆ ಎಂದು ಕೇಳಿದ್ದೇನೆ. ಇದಕ್ಕೆ ಉತ್ತರಿಸಲು ಸಮಯ ಬೇಕೆ? ಇಂಥ ಮುಖ್ಯ ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲ ಅಂದರೆ ಹೇಗೆ?

ಅಧ್ಯಕ್ಷರು:- ಅವರ ಇಲಾಖೆಯು ಹೊಸದಾಗಿ ಆಗಿದೆ. ಅದನ್ನು ಸರಿಮಾಡಿಕೊಳ್ಳೋಣ.